SIRGUPPA-HATCHOLLI VATHUMURUVANI NADANGA ROAD

176. Sri B.E.RAMAIAH (Siruguppa).—Will the Minister for Public Works and Electricity be pleased to state :—

(a) whether provision has been made in Budget for 1973-74 to construct the Siruguppa-Hatcholli-Vathumuruvani Nadanga Road connecting Siruguppa-Adoni Road;

(b) if so, the estimated cost of the road;

(c) the steps taken to execute the work at an early date?

Sri H. M. CHANNABASAPPA (Minister for Public Works and Electricity).—

(a) Yes.

(b) Rs. 18.60 lakhs (excluding the cost of the two High Level Causeways).—

(c) Plans and estimates are under scrutiny.

ಶ್ರೀ ಬಿ. ಇ. ರಾಮಯ್ಯ.— ತಾವು ನನ್ನ ಈ ಪ್ರಶ್ನೆಗೆ ಉತ್ತರವಾಗಿ plans and estimates are under Scrutiny ಎಂದು ಹೇಳಿದ್ದೀರಿ. ಇದು ಯಾವ ಹಂತದಲ್ಲಿದೆ, ಇದಕ್ಕೆ ಇನ್ನು ಎಷ್ಟು ದಿವಸ ಬೇಕಾಗುತ್ತದೆ?

†ಶ್ರೀ ಎಚ್. ಎಂ. ಚನ್ನಬಸಪ್ಪ.— ಪ್ಲಾನ್ಸ್ ಮತ್ತು ಎಸ್ಟಿಮೇಟ್ಸ್ ಈಗ ತಯಾರಾಗಿ ಬಂದಿವೆ. ಇದನ್ನು ಫಿನಾನ್ಸಿಯಲ್ ಪ್ರೋಜಿಷನ್ ಮತ್ತು ಕಂಪ್ಲಿಷನ್ ಆಫ್ ಸರ್ವೆ ಫಾರ್ಮಾಲಿಟೀಸ್ ನೋಡಿಕೊಂಡು ಮುಂದೆ ಇದರ ಬಗ್ಗೆ ಕಾರ್ಯ ಕ್ರಮ ತೆಗೆದುಕೊಳ್ಳುತ್ತೇವೆ. ಶಿರಗುಪ್ಪ-ಹಚ್ಚೊಳ್ಳಿಗೆ ೧೧,೬೦,೦೦೦ ರೂಪಾಯಿ ಗಳು, ವತುಮುರವಾನಿ— ನದಂಗ ರಸ್ತೆಗೆ ೭ ಲಕ್ಷ ರೂಪಾಯಿಗಳ, ಒಟ್ಟು ೧೮,೬೦,೦೦೦ ರೂಪಾಯಿಗಳ ಅಂದಾಜು ಬಂದಿದೆ.

ಶ್ರೀ ಬಿ. ಇ. ರಾಮಯ್ಯ.— ಈ ರಸ್ತೆ ರಾಜ್ಯದ ಹೆದ್ದಾರಿಯಾಗಿ ಸುಮಾರು ೧೩ ವರ್ಷಗಳಾದರೂ ಕೂಡ ಇವತ್ತಿನವರೆಗೂ ಸರ್ಕಾರದವರು ಇದರ ಬಗ್ಗೆ ಗಮನ ಕೊಟ್ಟಿಲ್ಲದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.— ನಾವು ಗಮನಕೊಡದೆ ಹೋದರೆ ಅಂದಾಜುಗಳೇ ತಯಾರಾಗುತ್ತಾ ಇರಲಿಲ್ಲ. ಈ ರಸ್ತೆ ಹೆದ್ದಾರಿಯಲ್ಲ.

ಶ್ರೀ ಬಿ. ಇ. ರಾಮಯ್ಯ.— ಇದು ಇಂಟರಸ್ಟೇಟ್ ಎಕನಾಮಿಕ ಇಂಪಾರ್ಟೆನ್ಸ್ ರೋಡ ಸುಮಾರು ೫೦ ಹಳ್ಳಿಗಳು ಈ ರಸ್ತೆಯಲ್ಲಿ ಬರುತ್ತವೆ. ಆದ್ದರಿಂದ ಈ ರೋಡನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಈ ರಸ್ತೆಯನ್ನು ಮಾಡುವುದಕ್ಕೋಸ್ಕರ ಅಂದಾಜನ್ನು ತಯಾರುಮಾಡಿದೆ. ಕೆಲವು ಫಾರ್ಮ್ಯಾಲಿಟೀಸ್ ಅಬ್ಸರ್ವ ಮಾಡ ತಕ್ಕದ್ದು ಇದೆ. ಇದನ್ನು ಮಾಡಿದ ಮೇಲೆ ಮುಂದಿನ ಕ್ರಮವನ್ನು ವಿಚಾರ ಮಾಡುತ್ತೀವೆ.

ಶ್ರೀ ಬಿ. ಇ. ರಾಮಯ್ಯ.— ೧೯೭೩-೭೪ ನೇ ಸಾಲಿನಲ್ಲಿ ಈ ರಸ್ತೆಯ ಕೆಲಸವನ್ನು ಶುರು ಮಾಡುತ್ತೀರಾ ?

(ಉತ್ತರ ಇಲ್ಲ.)

NON DEPOSITING OF AMOUNT BY ARRACK CONTRACTOR OF UDIPI

198. Sri J. L. KABADE (Ballolli).—Will the Chief Minister be pleased to state:—

(a) whether it is a fact that Sri Ashok Kumar, Arrack Contractor from Udipi has not deposited the amount according to the rules of the auction sale of arrack;

(b) whether any petitions and wires in this regards were received by the Government.

(c) if so, the action taken by the Government in the matter;

(d) whether it is a fact that the concerned authorities have not taken any action against the contractor as per rules?

Sri D. DEVARAJ URS (Chief Minister).—

(a) No.

(b) Yes.

(c) No action was necessary on the petitions and wires in view of answer to (a).

(d) Does not arise.

ಶ್ರೀ ಜೆ. ಎಲ್. ಕಬಾಡಿ.— ಹರಾಜಿನ ಮೂಲಕ ಸಾರಾಯಿ ಮಾರಾಟ ಮಾಡುವುದಕ್ಕೆ ನಿಯಮಗಳ ಮೇರೆಗೆ ಕಂಟ್ರಾಕ್ಟದಾರ ಠೇವಣಿಯನ್ನು ಇಡದಿರುವುದು ನಿಜವೇ ಎಂದು ಕೇಳಿದ್ದಕ್ಕೆ ನಿಜವಲ್ಲ ಎಂದು ಹೇಳಿದ್ದೀರಿ. ಹರಾಜು ಮಾಡಿದಮೇಲೆ ಕಂಟ್ರಾಕ್ಟದಾರ ನಿಯಮದ ಪ್ರಕಾರ ಹಣ ಕಟ್ಟಿದ್ದನೇ, ಹೇಗೆ? ಕಟ್ಟಿದ ಹಣ ಎಷ್ಟು ?

†ಶ್ರೀ ಎಚ್. ಎಂ. ಚನ್ನಬಸಪ್ಪ.— ೮—೬—೧೯೭೩ ರಲ್ಲಿ ಹರಾಜನ್ನು ಕನ್ಫರ್ಮ್ ಮಾಡಿದ್ದು, ಕನ್ಸ್ಟ್ರಕ್ಷೇನ್ ತಿಳುವಳಿಕೆಯನ್ನು ಕೊಟ್ಟರತಕ್ಕದ್ದು ೧೪—೬—೧೯೭೩ ರಲ್ಲಿ, ಆವನು ಹಣ ಕಟ್ಟರತಕ್ಕದ್ದು ೨೯—೬—೧೯೭೩ ರಲ್ಲಿ